# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 483 |
| ಮಾನ್ಯ ಸದಸ್ಯರ ಹೆಸರು | ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ |
| ಉತ್ತರಿಸಬೇಕಾದ ದಿನಾಂಕ | 12-12-2024 |
| ಉತ್ತರಿಸಬೇಕಾದವರು | ಸನ್ಮಾನ್ಯ ಮುಖ್ಯಮಂತ್ರಿಯವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಮನಗರ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದ ಒಟ್ಟು ಎಷ್ಟು ಇರುಳಿಗ ಹಾಡಿಗಳು ಮತ್ತು ಕುಟುಂಬಗಳಿವೆ: (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ರಾಮನಗರ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದ ಇರುಳಿಗ ಸಮುದಾಯದ ಹಾಡಿಗಳು ಹಾಗೂ ಕುಟುಂಬಗಳ ತಾಲ್ಲೂಕುವಾರು ಮಾಹಿತಿಯು ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ತಾಲ್ಲೂಕು</th><th>ಹಾಡಿಗಳ ಸಂಖ್ಯೆ</th><th>ಕುಟುಂಬಗಳ ಸಂಖ್ಯೆ</th></tr>
<tr><td>1</td><td>ಮಾಗಡಿ</td><td>11</td><td>229</td></tr>
<tr><td>2</td><td>ಕನಕಪುರ</td><td>27</td><td>5051</td></tr>
<tr><td>3</td><td>ರಾಮನಗರ</td><td>30</td><td>813</td></tr>
<tr><td>4</td><td>ಚನ್ನಪಟ್ಟಣ</td><td>1</td><td>90</td></tr>
<tr><td colspan="2">ಒಟ್ಟು</td><td>69</td><td>6183</td></tr>
</table>
</td></tr>
<tr><td>ಆ)</td><td>ಜಿಲ್ಲೆಯಲ್ಲಿರುವ ಇರುಳಿಗ ಸಮಾಜದ ಎಷ್ಟು ಹಾಡಿಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ ಮತ್ತು ಬಾಕಿ ಇರುವ ಹಾಡಿಗಳೆಷ್ಟು;</td><td>ರಾಮನಗರ ಜಿಲ್ಲೆಯಲ್ಲಿರುವ ಇರುಳಿಗ ಜನಾಂಗದವರು ವಾಸಿಸುತ್ತಿರುವ ಹಾಡಿಗಳಿಗೆ ಮೂಲಭೂತ ಸೌಕರ್ಯ ಒದಗಿಸಿರುವ ಹಾಗೂ ಬಾಕಿ ಇರುವ ಹಾಡಿಗಳ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ಮೂಲಭೂತ ಸೌಕರ್ಯ ಒದಗಿಸಿರುವ ಹಾಡಿಗಳ ಸಂಖ್ಯೆ</th><th>ಮೂಲಭೂತ ಸೌಕರ್ಯ ಒದಗಿಸಬೇಕಾಗಿರುವ ಹಾಡಿಗಳ ಸಂಖ್ಯೆ</th></tr>
<tr><td>1</td><td>57</td><td>12</td></tr>
</table>
</td></tr>
<tr><td>ಇ)</td><td>ಮಾಗಡಿ ತಾಲ್ಲೂಕಿನ ಗೊಲ್ಲರ ದೊಡ್ಡಿಯ ಹತ್ತಿರ ಸುಮಾರು 40 ಇರುಳಿಗ ಕುಟುಂಬಗಳು ಕನಿಷ್ಠ ಮೂಲಭೂತ ಸೌಲಭ್ಯಗಳಿಲ್ಲದೆ ಅರೆಕಲ್ಲಿನ ಮೇಲೆ ಜೀವನ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ</td><td>ಮಾಗಡಿ ತಾಲ್ಲೂಕಿನ ಕಸಬಾ ಹೋಬಳಿಯ ಬಾಚೇನಹಟ್ಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗೊಲ್ಲರಪಾಳ್ಯ ಇರುಳಿಗರ ಕಾಲೋನಿಯಲ್ಲಿ 30 ಇರುಳಿಗ ಕುಟುಂಬಗಳು ವಾಸಮಾಡುತ್ತಿದ್ದು, ಈ ಪೈಕಿ 15 ಕುಟುಂಬಗಳಿಗೆ ಪಕ್ಕಾ ಮನೆಗಳಿದ್ದು, ಉಳಿದ 15 ಕುಟುಂಬಗಳಿಗೆ ಕಚ್ಚಾ ಮನೆಗಳಿರುತ್ತದೆ. ಸದರಿ ಕಾಲೋನಿಗೆ ವಿದ್ಯುತ್, ಕುಡಿಯುವ ನೀರು</td></tr>
</table>

| | | |
|---|---|---|
| | ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಮತ್ತು ಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. ಒಂದು ಕಿ.ಮೀ ಸಿ.ಸಿ.ರಸ್ತೆ ನಿರ್ಮಾಣ ಮಾಡುವುದು ಅವಶ್ಯಕತೆ ಇರುತ್ತದೆ. ಸದರಿ ಇರುಳಿಗರು ಕಾಲೋನಿಯಲ್ಲಿ ಅರೆಕಲ್ಲಿನ ಮೇಲೆ ಕುಟುಂಬಗಳು ವಾಸ ಮಾಡುತ್ತಿರುವುದಿಲ್ಲ. |

**STW/SECB/STP/389/2024**

(ಸಿದ್ದರಾಮಯ್ಯ)
ಮುಖ್ಯಮಂತ್ರಿ